# ಗೋ ವಿಶ್ವ

Cow Universe — गौ विश्व

ಸರ್ವಜಿತ್ ಸಂವತ್ಸರ | ಕಾರ್ತಿಕ | ದಶಂಬರ್ ೨೦೦೭ | ಸಂಪುಟ–೧ | ಸಂಚಿಕೆ–೩

ಗುರುವಾಣಿ

## ಗೋ ಆಧಾರಿತ ಬದುಕು ನಮ್ಮದಾಗಲಿ



**ಹೂರಣ**


ಪ್ರಶ್ನೋತ್ತರ
ಭಾರತೀಯ ಗೋವಿನ ಚರ್ಮ
ಗೋಹತ್ಯಾ ನಿಷೇಧ ವಿಧೇಯಕ ಜಾರಿಗೆ ಬರಲಿ
ಕದನ ಕುತೂಹಲಿ ಕಂಗಾಯಂ
ದೇಸೀ ಹಸುಗಳು – ಭಾರತದ ಆರ್ಥಿಕತೆಯ ಸೂಕ್ತಶಕ್ತಿ
ಗೋಮೂತ್ರ ಮೂಲದ ಶೋಧನೆಗೆ ಹಕ್ಕುಸ್ವಾಮ್ಯ ಪ್ರಾಪ್ತಿ
ಒಂದು ಹಸು = ಒಂದು ಲಕ್ಷ ರುಪಾಯಿ ಉತ್ಪನ್ನ




ಸರ್ವಜನೋಪಕಾರಿಯಾದ ಗೋವು ಮೂವತ್ತಮೂರು ಕೋಟಿ ದೇವತೆಗಳ ಆವಾಸಸ್ಥಾನ. ಚಲಿಸುವ ದೇವಾಲಯವೂ ಚಲಿಸುವ ತೀರ್ಥಾಲಯವೂ ಔಷಧಿಯ ಗುಣಗಣಿಯಾಗಿ ಚಲಿಸುವ ಔಷಧಾಲಯವೆನಿಸುವ ಈ ಗೋವು ಮನುಕುಲದ ಸಕಲ ಕಾಮನೆಗಳನ್ನು ಪೂರೈಸುವುದರಿಂದಲೇ ಕಾಮಧೇನು. ಅವಳಿಲ್ಲದೇ ಮನುಕುಲದ ಜೀವನವಿಲ್ಲ. ನಾವು ಗೋವನ್ನು ಸಾಕುತ್ತೇವೆಂಬುದು ಕೇವಲ ಭ್ರಮೆ. ಗೋವಿನಿಂದ ನೇರ ಹಾಗೂ ಪರೋಕ್ಷವಾದ ಉಪಕೃತಿಯಿಂದಲೇ ನಾವು ಜೀವನ ಸಾಗಿಸುತ್ತಿದ್ದೇವೆ. ಗೋ ಆಧಾರಿತ ಬದುಕಿನ ಕ್ಷೇತ್ರಗಳತ್ತ ಒಮ್ಮೆ ಕಿರುನೋಟ ಬೀರೋಣ.

ಜೀವನ ಪರ್ಯಂತ ತನ್ನದಲ್ಲವರಿಗೂ ಅಮೃತತುಲ್ಯ ಹಾಲನ್ನು ನೀಡಿ ಅವರ ಬದುಕನ್ನು ಅಮೃತಮಯವಾಗಿಸುವ ಗೋವು ಮಮತಾಮಯಿ.

ಓಜಸ್ಸನ್ನು ವೃದ್ಧಿಪಡಿಸುವ, ಜೀವನೀಯ ಔಷಧಗಳಲ್ಲಿ ಶ್ರೇಷ್ಠವಾದ ರಸಾಯನವೇ ಹಾಲು. ಇನ್ನು ಮೊಸರು, ಬೆಣ್ಣೆ, ತುಪ್ಪ ಇವುಗಳು ಆಹಾರಪದಾರ್ಥವಾಗಿ ಸೇವನೆಯಾಗುತ್ತಿವೆ. ತೇಜೋವರ್ಧಕ ತುಪ್ಪ ಮಾನವ–ದೇವ–ಋಷಿಜನಮಾನ್ಯ. ಭಾರತೀಯ ಆಹಾರದ ಆಧಾರವಾಗಿರುವ ಗೋವು ಮನಸ್ಸಿಗೂ, ಅದಕ್ಕೂ ಹಿಂದಿರುವ ಮನಸಸ್ಪತಿಯ ದರ್ಶನಪರ್ಯಂತ ತನ್ನ ವ್ಯಾಪ್ತಿಯನ್ನು ಇಟ್ಟುಕೊಂಡಿದೆ.

ಕುಷ್ಠ, ತುರಿಕೆ, ಚರ್ಮರೋಗ ಮುಂತಾದ ರೋಗಗಳನ್ನು ನಿವಾರಿಸುವ ಗೋಮೂತ್ರ ಇಂದು ಕ್ಯಾನ್ಸರ್ ನಂತಹ ಭಯಂಕರ ರೋಗಕ್ಕೆ ಔಷಧಿಯಾಗಿ ಬಳಸಲ್ಪಡುತ್ತಿದೆ. ಅಗ್ನಿವರ್ಧಕವೂ, ಕಫ, ವಾತಹರವೂ ಆದ ಗೋಮೂತ್ರ ಸ್ವಾಸ್ಥ್ಯಜೀವನದ ಆಧಾರ. ಹಾಲು ತುಪ್ಪಗಳೂ ಆರೋಗ್ಯವರ್ಧಕ. ಜಗತ್ತು ಗೋವನ್ನು ತಮ್ಮ ಆರೋಗ್ಯದ ನೆಲೆಯೆಂದು ಭಾವಿಸುವ ದಿನಗಳು ಬರುತ್ತಿವೆ.

ಗೋವು ಭಾರತೀಯರ ಧನ. ಧನ ಎಂದರೆ ಸಂಪತ್ತು. ಪ್ರಾಚೀನ ಕಾಲದಲ್ಲಿ ವ್ಯಕ್ತಿಯ ಸಂಪತ್ತನ್ನು ಗೋವಿನ ಮೂಲಕ ಅಳೆಯಲಾಗುತ್ತಿತ್ತು. ಗೋಮಯವನ್ನು ಭೂಮಿಯನ್ನು ಫಲವತ್ತಾಗಿ ಇಡಬಲ್ಲದು. ನಮ್ಮ ಅನ್ನಾಹಾರಗಳು ಗೋಶ್ರಮದ ಮುಖೇನವೇ ಬರುವಂತಾಗಿದೆ. ಒಂದು ಗೋವು ವರ್ಷ ಒಂದಕ್ಕೆ ಎಪ್ಪತ್ತು ಸಾವಿರ ರುಪಾಯಿಗಳ ಸಂಪತ್ತನ್ನು ನೀಡಬಲ್ಲದು. ಪುರಾಣೇತಿಹಾಸಗಳಲ್ಲಿ ಮಹರ್ಷಿಗಳ ಮೌಲ್ಯವನ್ನು ಗೋವಿನಿಂದ ಅಳೆದುದು ಸ್ಮರಣೀಯ ಸಂಗತಿ.

ಭಾರತೀಯ ಜೀವನ ಕೃಷಿ ಆಧಾರಿತ. ಕೃಷಿಯು ಸಮರ್ಪಕ ಹಾಗೂ ಸಮೃದ್ಧವಾಗಬೇಕಾದರೆ ಗೋವಿನ ಸಹಾಯ ಅನಿವಾರ್ಯ. ಭೂಮಿ ಉಳಲು ಗೋವಿನ ಶ್ರಮ ಅಗತ್ಯ. ಫಲವತ್ತಾದ ಗೊಬ್ಬರ ಗೋಮಯದಿಂದ ಸಾಧ್ಯ. ರಾಸಾಯನಿಕ ಗೊಬ್ಬರ ಬರಡು ಭೂಮಿ ನಿರ್ಮಾಣಕ್ಕೆ ಆಹ್ವಾನ ನೀಡಿದಂತೆ.

ರೋಗಗಳಿಗೆ ತವರು ಮನೆ ಇದ್ದಂತೆ. ಗೋಮೂತ್ರವು ಇಂದು ಕೀಟನಿಯಂತ್ರಕ ಔಷಧವಾಗಿ ಬಳಸಲ್ಪಡುತ್ತಿದೆ. ಇನ್ನು ಸಾಕಾಣಿಕಾ ವ್ಯವಸ್ಥೆಯೂ ಗೋವಿನ ಮೂಲಕವೇ ಸಾಗುತ್ತಿದೆ. ಅಂತರ್ಜಲವನ್ನು ಹೆಚ್ಚಿಸುವ ಶಕ್ತಿ ಗೋಮಯಕ್ಕಿದೆ. ಅನ್ನಮೂಲವಾದ ಗೋಆಧಾರಿತ ಕೃಷಿಯಿಂದ ಮಾತ್ರ ಭಾರತದ ಅರ್ಥವ್ಯವಸ್ಥೆ ಸುಧಾರಿಸಲು ಸಾಧ್ಯ.

ಸಮುದ್ರ ಮಥನ ಸಂದರ್ಭದಲ್ಲಿ ಉದ್ಭವಿಸಿದ ಕಾಮಧೇನು ಸನಾತನ ಭಾರತೀಯರ ಧಾರ್ಮಿಕ ಬದುಕಿನ ಆಧಾರಸ್ತಂಭ. ಗೋವಿನ ಅಂಗಾಂಗಗಳು ಸಮಸ್ತದೇವತೆಗಳ ನೆಲೆ. ಗೋವಿನ ದರ್ಶನ, ಸ್ಪರ್ಶನಗಳು ಧನ್ಯತೆಯನ್ನುಂಟುಮಾಡಬಲ್ಲುದು. ಗೋವಿನ ಅನುಗ್ರಹದಿಂದ ಪುನೀತರಾದ ರಾಜ–ಮಹರ್ಷಿಗಳನೇಕ. ಸಂತನ –ಶಾಪ ವಿಮುಕ್ತ್ಯಾದಿಗಳು ಗೋವಿನ ಕರುಣೆಯಿಂದಾದ ಐತಿಹ್ಯ ಜನಜನಿತ. ಪಂಚಗವ್ಯ ಸೇವನೆ ಪವಿತ್ರಕರ, ಶುದ್ಧಿಕರ, ಯಜ್ಞ–ಯಾಗಾದಿಗಳು ಗೋವಿಲ್ಲದೆ ಅಪೂರ್ಣ. ಗೃಹನಿರ್ಮಾಣದಿಂದಾರಂಭಿಸಿ ಗೃಹಸ್ಥ ಜೀವನದ ಧನ್ಯತೆ ಗೋವಿನಲ್ಲಡಗಿದೆ. ಚತುರ್ವರ್ಣಾಶ್ರಮಿಗಳೂ ಗೋವಿನಲ್ಲೇ ತಮ್ಮ ಜೀವನದ ಭಾಗ್ಯವನ್ನು ಅರಸಿಕೊಂಡಿದಾ ರೆಂಬುದು ಸತ.ಸಂಗತಿ.

ಬದುಕಿನಲ್ಲಿ ನೆಮ್ಮದಿ_ಶಾಂತಿಗಳನ್ನು ಅನ್ವೇಷಿಸುವವರಿಗೆ ಗೋವು ದಿವ್ಯತಾಣ. ಆಳವಾದ ಮನೋರೋಗಗಳಿಗೆ ಪಂಚಗವ್ಯಾದಿಘೃತಗಳು ಔಷಧವಾಗಿ ಹೇಳಲ್ಪಟ್ಟಿದೆ. ಗೋವಿನ ದರ್ಶನಸ್ಪರ್ಶನಾದಿಗಳು ಮಾನಸೋಲ್ಲಾಸದ ಕೀಲಿಕೈ. ಮಧುಮೇಹ ರೋಗಿಗಳಿಗೆ ಗೋವಿನ ಸಹಚಾರವೇ ದಿವ್ಯೌಷಧವೆಂದು ಆಯುರ್ವೇದ ಸಾರುತ್ತಿದೆ.

ಇಂತಹ ಶ್ರೇಷ್ಠ ಸಂಪತ್ತಾದ ಗೋವಿನ ಸಹಾಯವಿಲ್ಲದೆ ಮನುಕುಲದ ಜೀವನ ಶೂನ್ಯ. ಗೋಆಧಾರಿತವಲ್ಲದ ಕೃಷಿ ಸಮಗ್ರ ಭಾರತದ ವಸುಂಧರೆಯನ್ನು ಬಂಜರಾಗಿಸುವ ಹುನ್ನಾರು. ವಿದೇಶೀ ಗೋತಳಿಗಳಿಂದ ದೇಶದ ಅಭಿವೃದ್ಧಿ ಎಂಬ ವಾದ ದೂಷಣೀಯ ಮತ್ತು ಅನರ್ಥಕ್ಕೆ ಆಹ್ವಾನವಿತ್ತಂತೆ.

**ಭಾರತೀಯ ಗೋತಳಿಗಳನ್ನು ಉಳಿಸಿ–ಬೆಳೆಸಿ–ಬಳಸಿ ಜೀವನದ ಸಮೃದ್ಧಿಯನ್ನು ಉಳಿಸಿಕೊಳ್ಳೋಣ**

(ಕೃಪೆ: ಧರ್ಮಭಾರತೀ)

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಕೃಷಿಯಲ್ಲಿ ಗೋವುಗಳ ಸಗಣಿ ಮತ್ತು ಗಂಜಲಕ್ಕೆ ಏನು ಮಹತ್ವವಿದೆ?

ಉ: ದನ ಕರುಗಳ ಸಗಣಿ ಮತ್ತು ಗಂಜಲ ಭೂಮಿಗೆ ಅತಿ ಉಪಯುಕ್ತ ಕೊಟ್ಟಿಗೆ ಗೊಬ್ಬರವನ್ನು ಒದಗಿಸುತ್ತದೆ. ಅದು ಸಾವಯವ ಗೊಬ್ಬರವಾಗಿರುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ. ಅದನ್ನು ಪೇಟೆಯಿಂದ ಹಣ ಕೊಟ್ಟು ತರುವ ಅಗತ್ಯವಿಲ್ಲ. ಪುಕ್ಕಟೆಯಾಗಿ ರೈತನ ಮನೆ ಬಾಗಿಲಲ್ಲೇ ದೊರೆಯುತ್ತದೆ. ದನ ಕರುಗಳ ಗಂಜಲ ಉತ್ತಮ ಕೀಟನಾಶಕವೂ ಹಾದು. ಕೃಷಿ ತಜ್ಞ ಸುಭಾಶ್ ಪಾಳೇಕರ್ ಹೇಳುವಂತೆ ಒಂದು ದೇಸಿ ತಳಿ ಹಸುವನ್ನು ಸಾಕಿದರೆ, ಅದರ ಸಗಣಿ ಮತ್ತು ಗಂಜಲದಿಂದ 'ಜೀವಾಮೃತ ಹಾಗೂ ಬೀಜಾಮೃತ' ತಯಾರಿಸಿ ಮೂವತ್ತು ಎಕರೆ ಜಮೀನನ್ನು ಲಾಭದಾಯಕವಾಗಿ ಕೃಷಿ ಮಾಡಬಹುದು ಎಂಬುದನ್ನು ಪ್ರಚಾರಪಡಿಸುತ್ತಿದ್ದಾರೆ. ಭಾರತೀಯ ಕೃಷಿ ಗೋಮುಖವಾಗತೊಡಗಿದೆ.

ಪ್ರ: ಗೋ – ಸಂರಕ್ಷಣೆ ಇದಕ್ಕೆ ಏನಾದರೂ ಪರಿಹಾರ ನೀಡಬಲ್ಲದೆ?

ಉ: ಕೇಂದ್ರ ಕೃಷಿ ಸಚಿವರು ಒಪ್ಪಿಕೊಂಡಿರುವಂತೆ ೧೯೯೩ ರಿಂದ ೨೦೦೩ ರ ವರೆಗೆ ೧೦ ವರ್ಷಗಳ ಅವದಿಯಲ್ಲಿ ಭಾರತದಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದಲ್ಲಿ ೨೦೦೬ ರ ೧೦ ತಿಂಗಳ ಅವದಿಯಲ್ಲಿ ೨,೫೦೦ ರೈತರು ಪ್ರಾಣ ಕಳೆದುಕೊಂಡಿದ್ದಾರೆ. ಕೃಷಿ ಇಂದು ಸಾವಿನ ಸಂಕೇತವಾಗಿದೆ. ಇದಕ್ಕೆ ಒಂದು ಮುಖ್ಯ ಕಾರಣ ರಾಸಾಯನಿಕ ಕೃಷಿ. ಅದರಿಂದ ಕೃಷಿ ದಿನೇ ದಿನೇ ದುಬಾರಿಯಗುತ್ತಿದೆ. ಸಾಲ ಮಾಡುವುದು ಅನಿವಾರ್ಯವಾಗಿದೆ. ರೈತನ ಉತ್ಪನ್ನಕ್ಕೆ ಬೆಳೆ ಇಲ್ಲ. ಮರ್ಯಾದಸ್ತ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಗೋ ಆಧಾರಿತ ಕೃಷಿ ದುಬಾರಿಯಲ್ಲ. ಸಾಲ ಮಾಡಬೇಕಾದ ಅಗತ್ಯವಿರುವುದಿಲ್ಲ. ಅದು ಸಿದ್ಧ ಮಾರ್ಗ. ಬಾರತೀಯ ಗೋ ವಂಶ ಸಂರಕ್ಷಣೆಯಿಂದ ಕೃಷಿ ಹಾಗು ಕೃಷಿಕ ಇಬ್ಬರ ಸಂರಕ್ಷಣೆಯು ಸಾದ್ಯ.

# ಭಾರತೀಯ ಗೋವಿನ ಚರ್ಮ

ಎಲ್ಲ ಪ್ರಾಣಿಗಳ ದೇಹ ರಚನೆಯಲ್ಲಿ ಚರ್ಮಕ್ಕೆ ಪ್ರಮುಖ ಸ್ಥಾನವಿದೆ. ದೇಹದೊಳಗಿನ ಅಂಗಾಂಗಗಳನ್ನು ರಕ್ಷಿಸುವುದು ಪ್ರಮುಖವಾಗಿ ಕಾಣುವ ಅಂಶವಾಗಿದೆ. ಆದರೆ ಕಣ್ಣಿಗೆ ತಕ್ಷಣಕ್ಕೆ ಗೋಚರವಾಗದ ಹಲವು ಮುಖ್ಯ ಕೆಲಸಗಳನ್ನು ಚರ್ಮವು ನಿರ್ವಹಿಸುತ್ತದೆ. ಭಾರತೀಯ ಗೋತಳಿಗಳ ಚರ್ಮವು ಬಹು ವಿಶಿಷ್ಟವಾದದ್ದು. ಅವುಗಳಲ್ಲಿ ಕೆಲವೊಂದನ್ನು ಇಲ್ಲಿ ಚರ್ಚಿಸಲಾಗಿದೆ.


**ಉಷ್ಣ ನಿಯಂತ್ರಕವಾಗಿ :**

- ಚರ್ಮದ ಬೆವರಿನ ಗ್ರಂಥಿಗಳು – ದೊಡ್ಡ ಗಾತ್ರ, ಹೆಚ್ಚಿನ ಸಂಖ್ಯೆ, ದೊಡ್ಡ ಆಕಾರ ಹಾಗಾಗಿ ಬೆವರಿನ ಪ್ರಮಾಣ ಹೆಚ್ಚು. ಬೆವರಿನ ಪ್ರಮಾಣ ಹೆಚ್ಚಾದಷ್ಟೂ ಬಿಸಿಲು, ಸೆಕೆಯನ್ನು ತಡೆದುಕೊಳ್ಳುವ ಗುಣ ಹೆಚ್ಚಾಗುತ್ತದೆ.
- ಚರ್ಮದ ವಿಸ್ತೀರ್ಣ – ಗಂಗೆತೊಗಲು, ಭುಜ, ಸಡಿಲವಾದ ಚರ್ಮ (ವಿಶೇಷವಾಗಿ ಹೊಟ್ಟೆಯಡಿಯಲ್ಲಿ) ಇವು ಚರ್ಮದ ವಿಸ್ತೀರ್ಣವನ್ನು ಅಧಿಕಗೊಳಿಸುತ್ತದೆ. ಹಾಗಾಗಿ ಬೆವರಿನ ಪ್ರಮಾಣ ಅಧಿಕ.
- ಭಾರತದ ಕೃಷಿಕರಿಗೆ ಎತ್ತುಗಳಿಂದ ಉಳುಮೆ ಹಾಗೂ ಗಾಡಿ ಎಳೆಯುವುದು ಅವಿಭಾಜ್ಯ ಅಂಗ. ಭಾರತದ ಉಷ್ಣತೆಗೆ ಹಗಲಿಡೀ ಕೆಲಸ ಮಾಡಬೇಕಾದರೆ ಬಿಸಿಲನ್ನು ಸಹಿಸಿಕೊಳ್ಳಬೇಕಾದದ್ದು ಅನಿವಾರ್ಯ. ಈ ಉದ್ದೇಶಕ್ಕಾಗಿ ದೇಶೀ ಗೋವಿನ ಚರ್ಮವು ಈ ಎಲ್ಲ ವಿಶೇಷತೆಗಳನ್ನು ಪಡೆದುಕೊಂಡಿದೆ.
- ರಾಜಸ್ತಾನದಲ್ಲಿ ಸಾಮಾನ್ಯವಾಗಿ "ಕುಡಿಯುವ ನೀರಿಲ್ಲ. ಆದರೆ ಸ್ನಾನಕ್ಕೆ ಬೇಕಾದರೆ ಹಾಲು ಕೊಡುತ್ತವೆ" ಎಂಬ ಮಾತು ಕೇಳಿಬರುತ್ತದೆ. ಇದಕ್ಕೆ ಕಾರಣ ಇಲ್ಲಿಯ ಹಸುಗಳು ಬಿಸಿಲಿನಲ್ಲಿ ಅಡ್ಡಾಡಿ, ಚಳಿಗಾಲದಲ್ಲಿಯೂ ಸಿಕ್ಕಿದ್ದನ್ನು ತಿಂದು, ಎರಡು ದಿನಕ್ಕೊಮ್ಮೆ ನೀರು ಕುಡಿದು, ೧೦ ಲೀಟರ್ ಹಾಲು ಕೊಡುವ ರಾಟಿ, ಥಾರ್‌ಪಾರ್ಕರ್ ಗೋವುಗಳೇ ರಾಜಸ್ಥಾನದ ಹಾಲಿನ ಕೊಡಗಳು.

**ಕೀಟ ನಿರೋಧಕವಾಗಿ :**

- ಬೆವರಿನ ಗ್ರಂಥಿಗಳು ಜಿಡ್ಡಿನಂತಹ ವಸ್ತುವನ್ನು ಸ್ರವಿಸುತ್ತಿರುತ್ತದೆ. ಇದಕ್ಕೆ ವಿಶೇಷವಾದ ಸುವಾಸನೆ ಇರುತ್ತದೆ. ಈ ಜಿಡ್ಡು ಕ್ರಿಮಿ ಕೀಟಗಳನ್ನು ದೂರ ಮಾಡುವ ಗುಣ ಹೊಂದಿದೆ. ಈ ಜಿಡ್ಡಿನಿಂದಾಗಿಯೇ ಎಂತಹಾ ಮಳೆಯಲ್ಲಿಯೂ ಸಹಜವಾಗಿ ಅಡ್ಡಾಡುವಂತಹ ಗುಣ ಬಂದಿದೆ.
- ಕೀಟವೊಂದು ಚರ್ಮದ ಮೇಲೆ ಕುಳಿತಾಗ, ಆ ಜಾಗದ ಸುತ್ತಮುತ್ತಲು ಮಾತ್ರ ಚರ್ಮವು ಸಂಕುಚಿತ, ವಿಕಸಿತಗೊಳ್ಳುತ್ತದೆ. ಬೆದರಿದ ಕೀಟವು ಓಡಿ ಹೋಗುತ್ತದೆ. ಇದಕ್ಕೆ ಕಾರಣ ಚರ್ಮದ ಅಡಿಯಲ್ಲಿರುವ ಮಾಂಸ ಪೇಶಿಗಳು. ಪ್ರಚೋದನೆಗೊಂಡಾಗ ಸ್ಥಳೀಯವಾಗಿ ಮಾತ್ರ ಚಾಲನೆಗೊಳ್ಳುವ ಗುಣ ಈ ಮಾಂಸ ಪೇಶಿಗಳಿಗಿವೆ.
- ಚರ್ಮದಲ್ಲಿ ಸಣ್ಣ ರೋಮಗಳು ಇರುತ್ತವೆ. ಹಾಗಾಗಿ ಕೀಟಗಳಿಗೆ ಇರಲು ಜಾಗವಿರುವುದಿಲ್ಲ. ಚರ್ಮವೂ ನುಣುಪಾಗಿ ಹೊಳೆಯುತ್ತಿರುತ್ತದೆ.

**– ಡಾ. ವೈ. ವಿ. ಕೃಷ್ಣಮೂರ್ತಿ**



# ಗೋಹತ್ಯಾ ನಿಷೇಧ ವಿಧೇಯಕ ಜಾರಿಗೆ ಬರಲಿ

ಭಾರತೀಯರ ಬದುಕಿನ ಅವಿಭಾಜ್ಯ ಅಂಗ ಗೋವು. ಗೋವು ಕೇವಲ ಭೌತಿಕ ಜೀವನದ ಅವಶ್ಯಕತೆಗಳ ಪೂರೈಕೆಯ ಸಾಧನ ಮಾತ್ರವಲ್ಲ. ಅದಕ್ಕಿರುವ ಸ್ಥಾನಮಾನ ಅತಿವಿಶಿಷ್ಟವಾದುದು.

ಭಾರತೀಯರ ಬದುಕಿನ ಚರಮಲಕ್ಷ್ಯವಾದ ವಿಶ್ವಾತ್ಮನಲ್ಲಿ ಒಂದಗುವ ಗುರಿಗೆ, ಆವಿಶ್ವಾತ್ಮನ ಆರಾಧನೆಗೆ ಉಪಯುಕ್ತವೆನ್ನುವ ಹಿನ್ನೆಲೆಯಲ್ಲಿ ಗೋವು ಪೂಜನೀಯವೆನಿಸಿದೆ. ಮಹರ್ಷಿಗಳು ಗೋವಿನ ಪವಿತ್ರ ದೇಹದಲ್ಲಿ ದೇವತೆಗಳ ಆವಾಸವನ್ನು ತಮ್ಮ ತಪಸ್ಸಿನಿಂದಾಗಿ ಕಂಡುಕೊಂಡರು. ಅಲ್ಲದೆ ಅಧ್ಯಾತ್ಮ ಸಾಧನೆಯವರೆವಿಗೂ ಗೋವಿನ, ಗೋವಿನ ಉತ್ಪನ್ನಗಳ ಅವಶ್ಯಕತೆಯನ್ನು ಮನಗಂಡರು. ಇದರಿಂದಾಗಿ ಗೋವು ಭಾರತೀಯರ ಹೃದಯಮಂದಿರದಲ್ಲಿ ಪ್ರತಿಷ್ಠಾಪನೆಗೊಂಡಿತು.

ಬೆಳಿಗ್ಗೆ ಗೋವನ್ನು ಪೂಜಿಸಿ, ಪ್ರದಕ್ಷಿಣೆ ಬಂದು ತನ್ನ ದಿನದ ಕರ್ತವ್ಯಗಳನ್ನು ಆರಂಭಿಸುವ, ಮೊದಲು ಗೋಗ್ರಾಸ ಕೊಟ್ಟು ಅನಂತರ ತಾನು ಆಹಾರ ಸ್ವೀಕರಿಸುವ, 'ಗಾವೋ ವಿಶ್ವಸ್ಯ ಮಾತರಃ' (ಗೋವುಗಳು ವಿಶ್ವದ ತಾಯಂದಿರು) ಎಂದು ಕೊಂಡಾಡುವ ಭಾರತೀಯರ ಪಾಲಿಗೆ ಗೋವಿನ ಹತ್ಯೆ ಹೃದಯವಿದ್ರಾವಕ ಸನ್ನಿವೇಶವೇ ಆಗಿದೆ.

ಈ ಹಿನ್ನೆಲೆಯಲ್ಲಿ ಗೋಹತ್ಯಾ ನಿಷೇಧ ವಿಧೇಯಕ ಜಾರಿಗೆ ಬರಬೇಕೆನ್ನುವುದು ಸಂಸ್ಕೃತಿ ನಿಷ್ಠ ಭಾರತೀಯರ ಆಗ್ರಹ.

(ಕೃಪೆ: ಆಪ್ತ ಸಂವಾದ, ಧರ್ಮಭಾರತೀ)

ಮಾಸದ ಗೋವು

# ಕದನ ಕುತೂಹಲಿ ಕಂಗಾಯಂ

ಜಲ್ಲಿಕಟ್ಟು! ಹೆಸರೇ ತಮಿಳುನಾಡಿನ ಈರೋಡ್, ಪುದುಕೊಟ್ಟೈ, ಮಧುರೈ ಆಸುಪಾಸಿನ ಯುವಕರಲ್ಲಿ ಒಂದು ರಣೋತ್ಸಾಹವನ್ನು ತುಂಬಿಬಿಡುತ್ತದೆ. ಪೊಂಗಲ್ ಹಬ್ಬ ಬಂತೆಂದರೆ ಸಾಕು, ಅವರ ಮನಸ್ಸಿನಲ್ಲಿ ಈ ಬಾರಿ ಜಲ್ಲಿಕಟ್ಟುವಿನ 'ವೀರಪಟ್ಟ' ಗೆಲ್ಲಬೇಕೆಂಬ ಕೆಚ್ಚು ನರನಾಡಿಯಲ್ಲಿ ಪ್ರವಹಿಸತೊಡಗುತ್ತದೆ. 'ವೀರಪಟ್ಟ'ಕ್ಕೋಸ್ಕರ ಅವರದು ವರ್ಷಾವಧಿ ತಯಾರಿ, ಸಾಮು. ಅಂತೆಯೆ ಹೆಂಗರುಳಿನವರಲ್ಲಿ ಹಳೆಯ ಘಟನೆಗಳನ್ನು ನೆನೆನು 'ಈ ಬಾರಿ ಏನಾಗುತ್ತೊ' ಎಂಬ ಎದೆ ನಡುಕ, ಕ್ಷೇಮವಾಗಿ ಮುಗಿದರೆ ಸಾಕೆಂದು ಕುಲದೈವಗಳಲ್ಲಿ ಹರಕೆ, ಮುಡಿಪು. ಈ ಎಲ್ಲ ಭಾವಗಳ ಕೇಂದ್ರ 'ಕಂಗಾಯಂ' ಎಂಬ ಕದನಕುತೂಹಲಿ ಮಾತ್ರ ಸ್ಥಿತಪ್ರಜ್ಞ!

ಜಲ್ಲಿಕಟ್ಟು, ಪೊಂಗಲ್ ಹಬ್ಬದ ಭಾಗವಾಗಿ ನಡೆಯುವ ಈ ಹೋರಿ ಕಾಳಗಕ್ಕೆ ಶತಮಾನಗಳ ಐತಿಹ್ಯವಿದೆ. ಹೋರಿ ಕಾಳಗ ಎಂದೊಡನೆ ನಮಗೆ ಸ್ಪೈನ್‌ನ ಜಗದ್ವಿಖ್ಯಾತ ಬುಲ್ ಫೈಟ್ ನೆನಪಾಗುತ್ತದರೂ ಅಲ್ಲಿನ ಹಾಗೆ ಇಲ್ಲಿ ಗೂಳಿಯ ಸಾವಿನ ಕ್ರೌರ್ಯದೊಂದಿಗೆ ಕಾಳಗ ಅಂತ್ಯವಾಗುವುದಿಲ್ಲ. ಜಲ್ಲಿಕಟ್ಟು ಎತ್ತುಗಳನ್ನು ಪಳಗಿಸುವುದಕ್ಕೆ ಮಾತ್ರ ಸೀಮಿತ. ವೀರಾವೇಷದಿಂದ ಬರುವ ಮದೋನ್ಮತ್ತ ಗೂಳಿಗಳನ್ನು ಬರಿಗೈಯಲ್ಲಿ ತಡೆದು. ಕೋಡುಗಳಲ್ಲಿರುವ ಬಹುಮಾನ (ಸಾಮಾನ್ಯವಾಗಿ ಹಣ) ಪಡೆದುಕೊಳ್ಳುವುದೆ ಪಂದ್ಯದ ಸವಾಲು. ಕೆಲವೆಡೆ ಎತ್ತುಗಳಿಗೆ ಹೆಂಡ ಕುಡಿಸಿ 'ಆಟದ ಮಜಾ' ಹೆಚ್ಚಿಸಲಾಗುತ್ತಾದರೂ ಅದು ಸಂಪ್ರದಾಯ ವಿರೊಧಿ. ೨೦೦೪ರಲ್ಲಿ ಅಲಂಗನಲ್ಲೂರಿನಲ್ಲಿ ನಡೆದ ಜಲ್ಲಿಕಟ್ಟುವಿನಲ್ಲಿ ದಿನವೊಂದರಲ್ಲೆ ಐವರು ಮೃತಪಟ್ಟರೆಂದರೆ ನಿಮಗೆ ಈ ಆಟದ ರುದ್ರಭೀಕರತೆಯ ಅರಿವಾದೀತು. ಹಾಗೆಯೆ ಆ ಗೂಳಿಗಳ ಶೌರ್ಯದ ಕುರಿತಾಗಿಯೂ ಕೂಡ ಕುತೂಹಲ ಉಂಟಾದೀತು. ಮಾನವನ ಅಹಂಕಾರಕ್ಕೆ ಮಣಿಯುವುದಿಲ್ಲೆಂದು ಸಂಪೂರ್ಣ ಶಕ್ತಿ ಉಡುಗುವವರೆಗೂ ಹೋರಾಡುವ ಆ ಗೂಳಿಗಳು ಕಂಗಾಯಂ ತಳಿಯವು.



ಕಂಗಾಯಂ, ತಮಿಳುನಾಡು

ನೀವು ತಮಿಳಿನ 'ವೀರುಮಾಂಡಿ' ಎಂಬ ಕಮಲ್‌ಹಾಸನ್, ಅಭಿರಾಮಿ ಅಭಿನಯದ ಚಿತ್ರ ನೋಡಿದ್ದರೆ ಅಲ್ಲಿ ನಾಯಕ ಕಮಲ್‌ಹಾಸನ್ ಜಲ್ಲಿಕಟ್ಟುವಿನಲ್ಲಿ ಭಾಗವಹಿಸುವ ದೃಷ್ಯ ಮನಸ್ಸಿನಲ್ಲಿ ಅಚ್ಚೊತ್ತಿರುತ್ತದೆ. ಚಿತ್ರದಲ್ಲಿ ತೋರಿಸುವ ಎತ್ತುಗಳೆರೆಡೂ ಕಂಗಾಯಂ ತಳಿಯವು. ಅವನ್ನು ಚೆನ್ನೈನ ಶಿವಾಜಿ ಗಾರ್ಡನ್ ತಂದಿಟ್ಟು ಮೂರು ತಿಂಗಳಿಂದ ದಿನಾಲೂ ಕಮಲ್‌ಹಾಸನ್ ಬಂದು ಮಾತಾಡಿಸಿ(!) ಪರಿಚಯ ಮಾಡಿಕೊಂಡಿದ್ದರೂ ಚಿತ್ರೀಕರಣದ ದಿನ ಹುಚ್ಚಾಗಿ ಓಡಿ ಕಮಲ್‌ಗೆ ಸುಸ್ತು ಹೊಡೆಸಿದವಂತೆ ಈ ಎತ್ತುಗಳು.

'ಕಂಗನಾಡು', 'ಕೋಂಗು' ಅಂತಲೂ ಕರೆಯಲ್ಪಡುವ ಕಂಗಾಯಂನ್ನು ಹಳೆ ಮೈಸೂರು ಪ್ರಾಂತ್ಯದಿಂದ ಮಧುರೈವರೆಗೂ ಕಾಣಬಹುದು. ಕಂಗೆಯಂ ಊರಿನ ಪಲಯಂಕೊಟ್ಟೈ ಪಟ್ಟಗಾರ್ ವಂಶಸ್ಥರು ಈ ತಳಿಯ ಮುಖ್ಯ ಸಂರಕ್ಷಕರಾದುದರಿಂದ ಇದಕ್ಕೆ ಕಂಗಾಯಂ ಎಂದು ಹೆಸರಾಯಿತು.

ಇದು ಅಪ್ಪಟ ಕೆಲಸಗಾರ ತಳಿ. ಸಾಮಾನ್ಯವಾಗಿ ಇವುಗಳ ಬಣ್ಣ ಬಿಳಿ ಅಥವಾ ಬೂದು. ಹೋರಿಯ ಭುಜ, ಮುಂಗಾಲು ಸಾಮಾನ್ಯವಾಗಿ ಕಪ್ಪಾದರೂ ಕೆಲವೊಮ್ಮೆ ನಸುಗೆಂಪು ಕೂಡ ಕಾಣಬಹುದು. ಅಗಲ ಮುಖದ ನಡುವಿನ ಕಣಿವೆ ಇದನ್ನು ಉಳಿದ ತಳಿಗಳಿಂದ ಪ್ರತ್ಯೇಕಿಸುತ್ತದೆ. ತಮಿಳುನಾಡಿನಲ್ಲಿ ದೊಡ್ಡತಳಿ, ಸಣ್ಣತಳಿ ಎಂದು ವಿಭಾಗಿಸುತ್ತಾರಾದರೂ ಅವುಗಳ ಮಧ್ಯೆ ಭಾರಿ ವ್ಯತ್ಯಾಸವೇನಿಲ್ಲ. ಸಣ್ಣತಳಿ ಹೆಚ್ಚಾಗಿ ಧರ್ಮಪುರಿ, ಪೊಲ್ಲಾಚಿ ಈರೋಡ್ ಪ್ರಾಂತ್ಯಗಳಲ್ಲಿ ಕಂಡುಬಂದರೆ, ದೊಡ್ಡ ತಳಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದು ಅರವಕುರ್ಚಿ, ದಿಂಡಿಗಲ್ ಪ್ರದೇಶಗಳಲ್ಲಿ. ಕೊರಂಗಾಡು ಎಂದು ಕರೆಯಲ್ಪಡುವ ಬೇಣಗಳಲ್ಲಿ ಇವುಗಳನ್ನು ಕೂಡಿ ಮೇಯಿಸುವ ಕ್ರಮ ವಿಶೇಷ. ಇವುಗಳ ಹಾಲಿನ ಇಳುವರಿ ದಿನಕ್ಕೆ ನಾಲ್ಕರಿಂದ ಐದು ಲೀಟರ್.

ಭಾರತೀಯ ಅಮೂಲ್ಯ ಗೋ ಪರಂಪರೆಯಲ್ಲಿ ವಿನಾಶದಂಚಿನಲ್ಲಿರುವ ತಳಿಗಳಲ್ಲಿ ಕಂಗಾಯಮ್ ಕೂಡ ಒಂದು. ಹತ್ತು ಜನ ಹಿಡಿದೆಳೆದರೂ ಜಗ್ಗದೆ ಅಸೀಮ ಪರಾಕ್ರಮ ಮೆರೆಯುತ್ತಿದ್ದ ಕಂಗಾಯಮ್‌ಗೆ ಇಂದು ಅಳಿವು ಉಳಿವಿನ ಪ್ರಶ್ನೆ. ತಮಿಳುನಾಡಿನ ಹೈನುಗಾರಿಕೆ ವಿಶ್ವವಿದ್ಯಾಲಯ (TNVASU) ಇದನ್ನು ಮನಗಂಡು ಕಂಗಾಯಮ್ ತಳಿಯ ಜೀವಾಂಕುರ ದ್ರವ ಸಂರಕ್ಷಿಸಿದೆ. ಐವತ್ತು ವರ್ಷಗಳ ನಂತರವೂ ಇದನ್ನು ಬಳಸಿಕೊಳ್ಳಬಹುದೆನ್ನುತ್ತಾರೆ ವಿಶ್ವವಿದ್ಯಾಲಯದ ತರಬೇತಿ ಮತ್ತು ಸಂಶೋಧನಾ ಕೇಂದ್ರದ ಅಧಿಕಾರಿ ರಾಮಸ್ವಾಮಿ. ಶ್ರೀರಾಮಚಂದ್ರಾಪುರ ಮಠ ಕೂಡ ಕಂಗಾಯಮ್ ಉಳಿವಿಗೆ ಪ್ರಯತ್ನಿಸುತ್ತಿದೆ. ಇವೆಲ್ಲ ಪ್ರಯತ್ನಗಳಿಂದ ಕಂಗಾಯಮ್ ಈ ಅಂತಿಮ ಯುದ್ಧದಲ್ಲಿ ಜಯಶಾಲಿಯಾಗುವುದೆ?

**– ಮಧುಕೇಶ ದೊಡ್ಡೇರಿ**

# ದೇಸೀ ಹಸುಗಳು – ಭಾರತದ ಆರ್ಥಿಕತೆಯ ಸೂಕ್ತಶಕ್ತಿ

ಹಾಲಿನ ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ ಮೊದಲನೆ ಕ್ರಮಾಂಕದ ರಾಷ್ಟ್ರವೆಂಬುದು ಸರ್ವವಿದಿತ. ಹಸುವೊಂದರ ತಲಾ ಹಾಲಿನ ಉತ್ಪಾದನೆ ನಮ್ಮಲ್ಲಿ ಅತಿ ಕಡಿಮೆಯಾದರೂ ಆರ್ಥಿಕವಾಗಿ ಹಾಲಿನ ಉತ್ಪಾದನೆಯಲ್ಲಿ ಲಾಭದಾಯಕವಾದಂತಹವು ಭಾರತೀಯ ಹಸುಗಳೇ ಎಂಬುದು ಇತ್ತೀಚಿನ ಒಂದು ವರದಿಯಿಂದ ತಿಳಿದು ಬಂದಿದೆ.

ಭಾರತೀಯ ಹಸುಗಳು ಉಪಯುಕ್ತತೆ ಇರುವುದು ಕೇವಲ ಹಾಲಿಗಾಗಿ ಮಾತ್ರವಲ್ಲ, ಅವು ನಮ್ಮ ರೈತರ ಬದುಕಿನ ಅವಿಭಾಜ್ಯ ಅಂಗವೇ ಆಗಿವೆ. ದೇಶದ ಕೃಷಿರಂಗಕ್ಕೆ ಅವುಗಳೇ ಬೆನ್ನೆಲುಬಾಗಿವೆ. ಭಾರೀ ಪ್ರಮಾಣದಲ್ಲಿ ಯಾಂತ್ರೀಕರಣವಾಗಿದ್ದರೂ, ಇಂದಿಗೂ ಶೇ.೯೦ರಷ್ಟು ನಮ್ಮ ಉಳುಮೆ ಮತ್ತು ಸಾಗಾಣಿಕೆಯ ಕಾರ್ಯದ ನಿರ್ವಹಣೆಯಾಗುತ್ತಿರುವುದು ಪಶುಬಲದಿಂದಲೇ. ಅಷ್ಟೇ ಅಲ್ಲ, ಗ್ರಾಮೀಣ ಪ್ರದೇಶಗಳಲ್ಲಿ ಅವುಗಳಿಂದಾಗಿಯೇ ಬಹುದೊಡ್ಡ ಪ್ರಮಾಣದಲ್ಲಿ ಜನರಿಗೆ ಜೀವನ ನಿರ್ವಹಣೆಯೂ ಆಗುತ್ತಿದೆ. ಆರ್ಥಿಕವಾಗಿ ದುರ್ಬಲವರ್ಗದವರು ತಮ್ಮ ಜೀವಿತಕ್ಕೆ ಪೂರಕ ಉತ್ಪನ್ನವಾಗಲೆಂದು ಹಸುಗಳನ್ನು ಸಾಕಲು ಇಷ್ಟಪಡುತ್ತಾರೆ. ಅವುಗಳಿಂದಾಗಿ ಅವರಿಗೆ ಇಂಧನ, ಸಾವಯವ ಗೊಬ್ಬರ ಮತ್ತು ಇನ್ನೂ ಅನೇಕ ಲಾಭದಾಯಕ ಉತ್ಪನ್ನಗಳು ಲಭಿಸುತ್ತವೆ. ಭಾರತವು ಈಗ ಕೃಷಿರಂಗದಲ್ಲಿನ ತನ್ನ ಮಹತ್ಸಾಧನೆಯಿಂದಾಗಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಅಗತ್ಯ ಮೀರಿ ಸಮೃದ್ಧಿಗಳಿಸಿದೆ. ಕೃಷಿಕ್ಷೇತ್ರದ ಇಂತಹ ಹೆಚ್ಚಿನ ಸಾಧನೆಯಲ್ಲಿ ಮಹತ್ವದ ಕೊಡುಗೆ ನಮ್ಮ ಪಶುಸಂಪತ್ತಿನಿಂದ ಬಂದುದು. ನಮ್ಮ ದೇಶದ ಆರ್ಥಿಕತೆಯನ್ನು ಮುನ್ನಡೆಸುವುದರಲ್ಲಿ ಗಣನೀಯ ಪಾತ್ರ ಸಲ್ಲಿಸಿದಂತಹವು ನಮ್ಮ ಹಸುಗಳು.

ಭಾರತದಲ್ಲಿ ಹಲವಾರು ಉತ್ತಮ ತಳಿಯ ಹಸುಗಳಿವೆ. ನಮ್ಮ ಕೃಷಿ, ಪರಿಸರ ಮತ್ತು ಪಶುಸಾಕಣೆಯ ವಿಧಾನದಲ್ಲಿ ವಿವಿಧ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವಂತೆ ಮಾಡಲಾದ ನೈಸರ್ಗಿಕ ಆಯ್ಕೆಯ ಪ್ರಕ್ರಿಯೆಯ ಮೂಲಕ ವಿಕಾಸಗೊಳಿಸಲಾದ ತಳಿಗಳು ಅವು. ನಮ್ಮ ಪರಿಸರಕ್ಕೆ ಉಪಯುಕ್ತವಾಗುವಂತಹ ಉತ್ತಮ ಗುಣಮಟ್ಟದ ತಳಿಗಳನ್ನು ಹಲವಾರು ತಲೆಮಾರುಗಳ ಪ್ರಯತ್ನದಿಂದ ವಿಕಾಸಗೊಳಿಸಲಾಗಿದೆ. ಇಂದು ನಮ್ಮ ಬಳಿ ವಿವಿಧ ರೀತಿಯ ಉದ್ದೇಶಗಳಿಗೆ ಉಪಯುಕ್ತವಾಗುವಂತಹ ೨೬–೨೭ ವಿಧದ ಉತ್ತಮ ತಳಿಯ ರಾಸುಗಳಿವೆ. ಉದಾ: ಅ) ಹೈನುಗಾರಿಕೆಯ ತಳಿಗಳು, ಆ) ಉಳುಮೆ ಮತ್ತು ಸಾಗಾಣಿಕೆಯ ಉದ್ದೇಶಕ್ಕಾಗಿ ಇರುವ ತಳಿಗಳು. ಇವೆರಡೂ ಉದ್ದೇಶಕ್ಕಾಗಿ ಇರುವಂತಹ ತಳಿಗಳು.

ಭಾರತೀಯ ರಾಸುಗಳಲ್ಲಿ ಸಾಹಿವಾಲ್, ಓಂಗೋಲ್, ಕೆಂಪುಸಿಂಧಿ, ಗಿರ್, ಥರ್ಪಾರ್ ಕರ್, ಕೆಂಕೆರೇಜ್, ಹರ್ಯಾನಾ, ನಾಗೋರಿ, ಅಮೃತಮಹಲ್ ಮೊದಲಾದವು ಹೈನುಗಾರಿಕೆ ಮತ್ತು ಉಳುಮೆ ಹಾಗೂ ಸಾಗಾಣಿಕೆಯ ಕೆಲಸಗಳಿಗೂ ಅತ್ಯುಪಯುಕ್ತವಾದ ತಳಿಗಳು ಎಂದು ತಿಳಿಯಲಾಗುತ್ತದೆ.

ಕ್ಷೀರೋತ್ಪತ್ತಿಯ ಕಾಲಾವಧಿಯಲ್ಲಿ ಹೈನುಗಾರಿಕೆಯ ತಳಿಯ ಹಸುಗಳ ಸರಾಸರಿ ಉತ್ಪಾದನೆ ೧೫೦೦ ರಿಂದ ೧೭೦೦ ಲೀ. ಗಳಷ್ಟು ಮತ್ತು ಕ್ಷೀರೋತ್ಪತ್ತಿಯ ಕಾಲಾವಧಿಯಲ್ಲಿ ೪೦೦೦ ಲೀ. ಗಳಷ್ಟು ಹಾಲು ನೀಡುತ್ತವೆ. ಥರ್ಪಾರ್ ಕರ್ ಮತ್ತು ಕಂಕ್ರೇಜ್ ತಳಿಯವು ಸಹ ತಮ್ಮ ಉಪಯುಕ್ತತೆಯಲ್ಲಿ ಹರ್ಯಾನಾ ತಳಿಗೆ ಸರಿಸಮವಾಗಿಯೇ ಇರುತ್ತವೆ. ಇದಲ್ಲದೆ ಈ ಉಭಯ ಉದ್ದೇಶದ ತಳಿಗಳ ಎತ್ತುಗಳು ಗಟ್ಟಿಮುಟ್ಟಾಗಿರುವಂತಹವು ಆಗಿದ್ದು, ಉಳುಮೆ ಮತ್ತು ಸಾಗಾಣಿಕೆಯ ಕೆಲಸದಲ್ಲಿ ತುಂಬ ಚುರುಕಾಗಿರುವಂತಹವು. ಈ ರೀತಿಯಲ್ಲಿ ನಮ್ಮಲ್ಲಿ ವಿವಿಧ ಉದ್ದೇಶಗಳಿಗಾಗಿ ವಿವಿಧ ತಳಿಯ ರಾಸುಗಳಿವೆ.

ನಮ್ಮ ಇಂತಹ ವಿವಿಧ ತಳಿಯ ರಾಸುಗಳನ್ನು ಹಲವಾರು ವಿದೇಶಗಳವರೂ ತಮ್ಮಲ್ಲಿ ಆಮದು ಮಾಡಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಅಲ್ಲಿ ಇವುಗಳನ್ನು ಬ್ರಾಹ್ಮಣ ಹಸುಗಳು ಎಂದು ಕರೆಯುತ್ತಾರೆ. ಓಂಗೋಲ್ ಜಾತಿಯ ಉತ್ತಮ ಹಸುಗಳನ್ನು ಹಲವು ವಿದೇಶಗಳಲ್ಲಿ ಈಗಲೂ ಸುರಕ್ಷಿತವಾಗಿ ಉಳಿಸಿಕೊಂಡಿದ್ದಾರೆ. ದುರ್ದೈವದ ಸಂಗತಿಯೆಂದರೆ ಎಲ್ಲಿ ಇಂತಹ ಉತ್ತಮ ತಳಿಗಳು ವಿಕಾಸಗೊಂಡವೋ, ಅಂತಹ ಭಾರತದಲ್ಲಿ ಅವುಗಳ ರೇತಕಣಗಳ ಮಹತ್ವವೇ ಪೂರಾ ಅಲಕ್ಷಿತವಾಗಿದೆ. ಇಂದು ಇಂತಹ ಅನೇಕ ಅಮೂಲ್ಯ ತಳಿಗಳು ಅಪಾಯಕ್ಕೀಡಾಗಿವೆ. ಹೆಚ್ಚಿನ ಭಾರತೀಯ ತಳಿಗಳ ಉತ್ಪಾದಕಸಾಮರ್ಥ್ಯ ಮತ್ತು ವಿಶೇಷಗುಣಗಳ ಕಲ್ಪನೆಯು ಇಲ್ಲದ ಕಾರಣ ಪೂರಾ ಅವಿವೇಕದಿಂದ ವಿದೇಶೀ ರಕ್ತದ ಮಿಶ್ರತಳಿಗಳನ್ನು ಈಗ ವಿಕಾಸಗೊಳಿಸಲಾಗಿದೆ. ಇದರಿಂದಾಗಿ ಉತ್ತಮ ಗುಣವಂತಿಕೆಯುಳ್ಳ ದೇಶೀಯ ರಾಸುಗಳ ಗುಣಮಟ್ಟ ಕಡಿಮೆಯಾಗಿದೆಯಲ್ಲದೆ, ಕೆಲವಂತೂ ಪೂರಾ ಇಲ್ಲವಾಗಿವೆ.

ವಿದೇಶೀ ರಕ್ತದ ಮಿಶ್ರ ತಳಿಗಳಿಂದ ಲಾಭಕ್ಕಿಂತ ಸಮಸ್ಯೆಗಳೇ ಹೆಚ್ಚು ಎಂಬುದು ಈಗ ಅನುಭವಕ್ಕೆ ಬರುತ್ತಿದೆ. ಮೊದಲ ಒಂದೆರಡು ತಲೆಮಾರುಗಳಲ್ಲಿ ಅವುಗಳು ಅಧಿಕ ಹಾಲು ಉತ್ಪನ್ನ ಮಾಡಿದರೂ, ಮುಂದಿನ ತಲೆಮಾರುಗಳಲ್ಲಿ ಇದು ಕ್ರಮೇಣ ಇಳಿಮುಖವಾಗುತ್ತದೆ. ಹೀಗಾಗಿ ಹಾಲಿನ ಉತ್ಪನ್ನದಲ್ಲಿ ಲಾಭವೆಂಬುದು ಸಹ ತುಸು ಕಾಲಾವಧಿಗಾಗಿ ಮಾತ್ರವಿರುತ್ತದೆ. ಇನ್ನೊಂದು ಕಡೆ ಇದೇ ಅವಧಿಯಲ್ಲಿ ಅವುಗಳ ಸಾಕುವಿಕೆಯಲ್ಲಿ ಹತ್ತಾರು ವಿಧ ಸಮಸ್ಯೆಗಳು ಎದುರಾಗುತ್ತವೆ. ಅವುಗಳ ಪೋಷಣೆಗೆ ಧಾರಾಳವಾಗಿ ಆಹಾರ ಧಾನ್ಯಗಳೇ ಬೇಕಾಗಿರುವುದರಿಂದ ಅವುಗಳ ಆಹಾರದ ವಿಷಯದಲ್ಲಿ ಮಾನವರ ಜತೆಯಲ್ಲೇ ಸ್ಪರ್ಧೆಗಿಳಿಯುತ್ತವೆ. ಅದೇ ರೀತಿ ಅವುಗಳನ್ನು ಸಾಕಲು ವಿಶೇಷ ರೀತಿಯ ದೊಡ್ಡಿ ಅಗತ್ಯವಾಗಿದ್ದು, ಭಾರತೀಯ ರೈತರಿಗೆ ಅದರ ವೆಚ್ಚ ತೂಗಿಸುವುದೇ ಕಷ್ಟದ ಸಂಗತಿಯಾಗಿದೆ. ಸೆಕೆ ಅಥವಾ ಚಳಿಯಲ್ಲಿ ಒಂದಷ್ಟು ಏರುಪೇರಾದರೂ ಅವುಗಳ ಹಾಲುತ್ಪನ್ನ ಸಹ ಅಸ್ತವ್ಯಸ್ತಗೊಳ್ಳುತ್ತದೆ. ಈ ಹಸುಗಳ ಆರೋಗ್ಯವಂತೂ ಸದಾ ಕಿರಿಕಿರಿಯದ್ದೇ. ಅವುಗಳಗೆ ವಿಶೇಷ ಆರೈಕೆ ಅಗತ್ಯವಿದ್ದು, ಔಷಧಿಗಾಗಿ, ಆರೋಗ್ಯ ರಕ್ಷಣೆಯ ಇನ್ನಿತರ ಅಗತ್ಯಗಳಿಗಾಗಿ

ಭಾರೀ ಖರ್ಚು ಮಾಡಬೇಕಾದುದು ಅನಿವಾರ್ಯವಾಗುತ್ತದೆ. ಮಿಶ್ರ ತಳಿಯ ಹಸುಗಳಿಗೆ ಸಂಬಂಧಿಸಿದ ಇನ್ನೊಂದು ಸಮಸ್ಯೆಯೆಂದರೆ, ಅವುಗಳ ಗಂಡು ಪ್ರಾಣಿಗಳು ಯಾವುದೇ ಕೆಲಸಕ್ಕೂ ನಿರುಪಯುಕ್ತವಾದಂತಹವು. ಹೀಗಾಗಿ ಮಿಶ್ರತಳಿಯ ಹಸುಗಳಿಂದ ಅನುಕೂಲಗಳಿಗಿಂತ ಹೆಚ್ಚಾಗಿ ಸಮಸ್ಯೆಗಳನ್ನು ಮತ್ತು ಅನಾನುಕೂಲಗಳನ್ನೇ ಅನುಭವಿಸಬೇಕಾಗಿ ಬರುತ್ತದೆ. ಈಗೀಗ ನಮ್ಮ ಜೀವ ವಿಜ್ಞಾನಿಗಳು, ಯೋಜನಾಕರ್ತರು ಮತ್ತು ಪಶುತಳಿಗಳನ್ನು ವಿಕಾಸಗೊಳಿಸುವಂತಹವರು, ಲಂಗು ಲಗಾಮಿಲ್ಲದೆ ಮಿಶ್ರತಳಿಗಳನ್ನು ವಿಕಾಸಗೊಳಿಸಿದುದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆ ಮಾತ್ರವಲ್ಲ ಕೆಲವು ಉತ್ತಮ ಜಾತಿಯ ಭಾರತೀಯ ತಳಿಗಳನ್ನೇ ನಾವು ಕಳೆದುಕೊಂಡಿದ್ದೇವೆ ಎಂಬ ಅರಿವು ಮೂಡಿಸಿಕೊಂಡಿದ್ದಾರೆ. ಜೊತೆಯಲ್ಲಿ ನಮ್ಮೆಲ್ಲ ಅವಶ್ಯಕತೆಗಳನ್ನು ಪೂರೈಸಲು ನಮ್ಮದೇ ತಳಿಗಳು ಅತ್ಯಂತ ಸೂಕ್ತವಾದವು ಎಂಬುದನ್ನು ಅರ್ಥಮಾಡಿಕೊಂಡಿದ್ದಾರೆ. ನಮ್ಮದೇ ತಳಿಗಳಲ್ಲಿ ಹಲವು ವಿಧದ ಉತ್ತಮ ಸಾಮರ್ಥ್ಯಗಳಿವೆ. ಇಂದು ಅತ್ಯಗತ್ಯವಾಗಿ ಬೇಕಾಗಿರುವುದು ಅಂತಹ ತಳಿಗಳ ಆಯ್ಕೆ ಮತ್ತು ಅವುಗಳನ್ನು ಹೆಚ್ಚೆಚ್ಚು ಉತ್ತಮವಾಗಿ ಸುಧಾರಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಮಾತ್ರ.

– **ಡಾ. ಎ. ಕೆ. ಗರ್ಗ**

(ಕೃಪೆ: ಆಪ್ತ ಸಂವಾದ, ಧರ್ಮಭಾರತೀ)

## ಗೋಮೂತ್ರ ಮೂಲದ ಶೋಧನೆಗೆ ಹಕ್ಕುಸ್ವಾಮ್ಯ ಪ್ರಾಪ್ತಿ

ಭಾರತದ ಕೌನ್ಸಿಲ್ ಆಫ್ ಸೈಂಟಿಫಿಕ್ ಎಂಡ್ ಇಂಡಸ್ಟ್ರಿಯಲ್ ಮತ್ತು ನಾಗಪುರಸ್ಥಿತ ಗೋ ವಿಜ್ಞಾನ ಅನುಸಂಧಾನ ಕೇಂದ್ರ ಇವೆರಡು ಜಂಟಿಯಾಗಿ ಇತ್ತೀಚೆಗೆ ಆಂಟಿಬಯೋಟಿಕ್ ಮತ್ತು ಆಂಟಿಕ್ಯಾನ್ಸರ್ ಔಷಧಿಗಳ ಕಾರ್ಯಕ್ಷಮತೆಯನ್ನು ತೀವ್ರಗೊಳಿಸಬಲ್ಲ ಹೊಸಸಂಯುಕ್ತ ವಸ್ತುವೊಂದನ್ನು ಆವಿಷ್ಕರಿಸಿವೆ. ಶುದ್ಧವಾದ ಗೋಮೂತ್ರವನ್ನು ಭಟ್ಟಿಯಿಳಿಸಿ ತಯಾರಿಸಲಾಗುವ ಈ ಸಂಯುಕ್ತಕ್ಕೆ ಅಮೆರಿಕ ಸರಕಾರವು ಈಗ ಹಕ್ಕುಸ್ವಾಮ್ಯವನ್ನು ನೀಡಿದೆ. ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ಮಾಜಿ ಮಂತ್ರಿಗಳಾಗಿದ್ದ ಶ್ರೀ ಮುರಳಿ ಮನೋಹರ ಜೋಶಿಯವರು ಇಂಡಿಯನ್ ನ್ಯಾಶನಲ್ ಸೈನ್ಸ್ ಅಕಾಡೆಮಿಯು ನವದೆಹಲಿಯಲ್ಲಿ ಏರ್ಪಡಿಸಿದ್ದ ಸಮಾರಂಭವೊಂದರಲ್ಲಿ ಮಾತನಾಡುತ್ತ 'ಫಾರ್ಮಾಸ್ಯೂಟಿಕಲ್ ಕಾಂಪೋಜಿಶನ್ ಕಂಟೈನಿಂಗ್ ಕೌ ಯೂರೀನ್ ಡಿಸ್ಟಿಲ್ಲೇಟ್ ಎಂಟ್ ಆನ್‌ಆಂಟಿಬಯಾಟಿಕ್' ಎಂಬ ಈ ಹಕ್ಕು ಸ್ವಾಮ್ಯದ ಕ್ರಮಾಂಕವು ೬೪೧೦೦೫೯ ಎಂದು ತಿಳಿಸಿದ್ದಾರೆ.

ಈ ಸಂಯುಕ್ತದ ಬಗ್ಗೆ ಅಮೇರಿಕದ ಹಕ್ಕುಸ್ವಾಮ್ಯ ಕಛೇರಿಯು ತನ್ನ ಟಿಪ್ಪಣಿಯಲ್ಲಿ ಹೇಳಿರುವುದು ಹೀಗೆ 'ಗೋಮೂತ್ರವನ್ನು ಭಟ್ಟಿಯಿಳಿಸಿ ತಯಾರಿಸಲಾಗಿರುವ ಈ ಹೊಸ ಸಂಯುಕ್ತವು ಕ್ಯಾನ್ಸರ್ ವಿರೋಧೀ ಮತ್ತು ಸೋಂಕು ವಿರೋಧೀ ಮೊದಲಾದುವುಗಳನ್ನು ಒಳಗೊಂಡು ಎಲ್ಲ ವಿಧ ಜೈವಿಕ ಕ್ರಿಯಾಶೀಲ ಅಣುಗಳನ್ನು ಇನ್ನಷ್ಟು ಹೆಚ್ಚು ಕ್ರಿಯಾಶೀಲಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡುತ್ತದೆ. ಆಟಿಟಿಬಯಾಟಿಕ್ ಮತ್ತು ಆಂಟಿ ಕ್ಯಾನ್ಸರ್ ಔಷಧಿಗಳ ಬಳಕೆಯ ಪ್ರಮಾಣವನ್ನು ಗಣನೀಯವಾಗಿ ಕಟಿತಗೊಳಿಸಿ, ಆದರೆ ಆ ಔಷಧಿಗಳು ಮಾಡುವಂತಹ ಜೈವಿಕ ಕ್ರಿಯಾಶೀಲ ಅಣುಗಳ ಚಟುವಟಿಕೆಯನ್ನು ತೀವ್ರಗೊಳಿಸುವಲ್ಲಿ ಈ ಸಂಯುಕ್ತವು ನೇರವಾಗಿ ಸಹಾಯಕವಾಗುವುದನ್ನು ಗುರುತಿಸಲಾಗಿದೆ'.

ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಗೋಮೂತ್ರವನ್ನು ಔಷಧಿಯಾಗಿ ಸೇವನೆ ಮಾಡುವುದು ರೂಢಿಯಲ್ಲಿತ್ತು. ಆದರೆ ಈ ಬಗ್ಗೆ ಪ್ರಯೋಗಾಲಯದಲ್ಲಿ ವೈಜ್ಞಾನಿಕವಾದ ಸಂಶೋಧನೆ ೧೯೯೮ರಲ್ಲಷ್ಟೇ ಪ್ರಾರಂಭವಾಯಿತು. ಸಿ. ಎಸ್. ಐ. ಆರ್. ಮೊದಲು ಗೋಮೂತ್ರದ ರಾಸಾಯನಿಕ ಗುಣಗಳ ಬಗ್ಗೆ ಸಂಶೋಧನೆ ನಡೆಸಿತು. ಲಖ್ನೋದಲ್ಲಿರುವ ಸಿ.ಎಸ್.ಐ.ಆರ್.ನ ಅಂಗಸಂಸ್ಥೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಸಿನಲ್ ಎಂಡ್ ಆರೋಮೆಟಿಕ್ ಪ್ಲಾಂಟ್‌ನಲ್ಲಿ ಮೂರು ವರ್ಷಗಳ ಕಾಲ ರೂ.ಹತ್ತು ಲಕ್ಷದಷ್ಟು ವೆಚ್ಚದಲ್ಲಿ ಈ ಸಂಶೋಧನೆ ನಡೆಸಿದ ನಂತರ ಗೋಮೂತ್ರದಲ್ಲಿ ಒಂದು ವಿಶೇಷವಾದ ಸಂಯುಕ್ತ ವಸ್ತು ಇರುವುದನ್ನು ಗುರುತಿಸಲಾಯಿತು. ಅದನ್ನು ಕೆಲವು ಆಂಟಿಬಯಾಟಿಕ್ಸ್ ಜತೆಯಲ್ಲಿ ಉದಾಹರಣೆಗೆ ಸಾಮಾನ್ಯವಾಗಿ ಕ್ಷಯನಿರೋಧಕ ಔಷಧಿಯಾಗಿರುವ ರಿಫಾಂಪಿಸಿನ್ ಜತೆಗೂಡಿಸಿ ಕೊಟ್ಟಲ್ಲಿ, ಆಗ ಔಷಧಿಯು ಹೆಚ್ಚು ಚುರುಕಾಗಿ ಕೆಲಸ ಮಾಡುವುದಾಗಿ ಲಕ್ಷ್ಯಕ್ಕೆ ಬಂತು.

ಇದರ ಸಂಶೋಧಕರಲ್ಲೊಬ್ಬರಾಗಿರುವ ಜಿ.ವಿ.ಎ.ಕೆ.ಯ ಕಾರ್ಯದರ್ಶಿ ಸುನಿಲ್ ಬಾಲಕೃಷ್ಣ ಮಾನಸಿಂಘಾ ಅವರು ತಮ್ಮ ಸಂಸ್ಥೆಯು ಇದೇ ಮೊದಲ ಬಾರಿ ಅಮೆರಿಕದ ಹಕ್ಕು ಸ್ವಾಮ್ಯವನ್ನು ಪಡೆದಿರುವುದಾಗಿ ಹೇಳಿದ್ದಾರೆ.

ಇದರಲ್ಲಿ ಶುದ್ಧವಾದ ಭಾರತೀಯ ತಳಿಗಳಾದ ಗೋವುಗಳದೇ ಮೂತ್ರವಿರಬೇಕೆಂಬುದು ಅತಿ ಮುಖ್ಯವಾದುದು. ನಾಗಪುರದ ಈ ಕೇಂದ್ರದಲ್ಲಿ ಅಂತಹ ೧೬೦ ಹಸುಗಳಿದ್ದು, ಪ್ರತಿ ತಿಂಗಳೂ ಅವುಗಳಿಂದ ಒಂದು ಸಾವಿರಕ್ಕಿಂತಲೂ ಹೆಚ್ಚು ಲೀಟರ್ ಮೂತ್ರದ ಸಂಗ್ರಹವಾಗುತ್ತಿದೆ. ಈ ರೀತಿ ಸಂಗ್ರಹವಾದ ಗೋಮೂತ್ರವನ್ನು ೫೦–೬೦ ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಕುದಿಸಿ 'ಕಾಮಧೇನು ಅರ್ಕ' ಎಂಬ ದ್ರಾವಣವನ್ನು ತಯಾರಿಸಲಾಗುತ್ತದೆ. ಈ ರೀತಿ ಭಟ್ಟಿ ಇಳಿಸಲಾದ ದ್ರಾವಣವು ಮೂತ್ರಪಿಂಡದ ಕಾಯಿಲೆಗಳನ್ನು ಒಳಗೊಂಡು ಹಲವಾರು ವ್ಯಾಧಿಗಳಿಗೆ ಉತ್ತಮವಾದ ಔಷಧಿಯಾಗಿದೆ. ಲೀಟರ್ ಒಂದಕ್ಕೆ ರೂ.೧೧೦ಕ್ಕೆ ಅದು ಲಭಿಸುತ್ತದೆ. ಸಿ.ಎಸ್.ಐ.ಆರ್.ನ ಡೈರೆಕ್ಟರ್ ಜನರಲ್ ಆಗಿರುವ ಆರ್. ಎ. ಮಾಶೇಲ್ಕರ್ ಅವರು 'ಇದೊಂದು ಜಂಟಿಯಾದ ಮಹತ್ಸಾಧನೆ' ಎಂದಿದ್ದಾರೆ. ಗೋಮೂತ್ರದ ಇನ್ನೂ ಹೆಚ್ಚಿನ ಚಿಕಿತ್ಸಕೀಯ ಗುಣಗಳ ಬಗ್ಗೆ ಈಗ ಸಂಶೋಧನೆ ಮುಂದುವರೆದಿದೆ. ಆದರೆ ಅದನ್ನು ಜನಸಾಮಾನ್ಯರು ಔಷಧಿಯಾಗಿ ಬಳಸುವಂತಾಗಲು ಇನ್ನೂ ಹತ್ತಾರು ವರ್ಷಗಳು ತಗಲಬಹುದು ಎಂದು ಸಹ ಅವರು ಹೇಳುತ್ತಾರೆ. (ಕೃಪೆ: ಆಪ್ತ ಸಂವಾದ, ಧರ್ಮಭಾರತೀ)

# ಅಮೃತವೇ ವಿಷವಾದಲ್ಲಿ

'ಒಕ್ಸಿಟೋಸಿನ್' ಎಂದರೆ ಏನೆಂದು ಗೊತ್ತೇ? ಅದೊಂದು ಹಾರ್ಮೋನು. ಹಸುವಿನ ಶರೀರದಲ್ಲಿ ಸಹಜವಾಗಿ ಉತ್ಪತ್ತಿಯಾಗುವ ಈ ಹಾರ್ಮೋನು, ತಾಯಿ ಹಸು ತನ್ನ ಕರುವನ್ನು ಕಂಡಾಗ ತಾನಾಗಿಯೇ ಸ್ರವಿಸಲಾರಂಭಿಸುತ್ತದೆ. ಪರಿಣಾಮವಾಗಿ ಅದರ ಕೆಚ್ಚಲಿನಿಂದ ಧಾರಾಳವಾಗಿ ಹಾಲು ಉಕ್ಕಿ ಹರಿಯಲಾರಂಭಿಸುತ್ತದೆ. ಎಂದರೆ ತಾಯಿ ಹಸುವಿನಲ್ಲಿ ಉಕ್ಕಿ ಹರಿಯುವ ಮಾತೃವಾತ್ಸಲ್ಯಕ್ಕೆ ಈ ಹಾರ್ಮೋನ್ ಇನ್ನೊಂದು ಹೆಸರು ಎಂದರೂ ತಪ್ಪಲ್ಲ. ಆದರೆ ಮಾನವನ ದುರಾಸೆ ಯಾವ ಹೀನ ಮಟ್ಟಕ್ಕೆ ತಲುಪಬಹುದು ಎಂಬುದನ್ನು ತಿಳಿಯಲು ಈ ಹಾರ್ಮೋನ್‌ನ ದುರುಪಯೋಗವಾಗುತ್ತಿರುವುದರ ಕುರಿತು ಇತ್ತೀಚಿಗೆ ಬರುತ್ತಿರುವ ವರದಿಗಳೇ ಸಾಕಾಬಹುದು.

ದೆಹಲಿಯಲ್ಲಿನ ಹಲವು ಡೈರಿಗಳಲ್ಲಿ ಇಂಜೆಕ್ಷನ್ ರೂಪದಲ್ಲಿ ಈ ಹಾರ್ಮೋನ್ ಈಗ ಧಾರಾಳವಾಗಿ ಬಳಕೆಯಾಗುತ್ತಿದೆ. ಹೆಚ್ಚಿನ ಡೈರಿಗಳಲ್ಲಿ ಹಸು ಮತ್ತು ಎಮ್ಮೆಗಳಿಗೆ ದಿನಕ್ಕೆರಡು ಬಾರಿ ಈ ಸೂಜಿಮದ್ದನ್ನು ಚುಚ್ಚಲಾಗುತ್ತಿರುವುದು ವರದಿಯಾಗಿದೆ. ಹುಟ್ಟಿದ ಎಳೆಗರುಗಳನ್ನು ಕಸಾಯಿಖಾನೆಗೆ ಮಾರಾಟ ಮಾಡುವುದು ಒಂದು ಲಾಭದಾಯಕ ವ್ಯಾಪಾರವಾಗಿರುವುದರಿಂದ ಆ ಮೂಲಕ ಹಣಗಳಿಕೆಯ ಸುಲಭ ಮಾರ್ಗವನ್ನಂತೂ ಯಾವುದೇ ಪಾಪಪ್ರಜ್ಞೆಯಿಲ್ಲದೆ ಬಳಸಲಾಗುತ್ತದೆ. ಇತ್ತ ತಾಯಿ ಹಸು ಮತ್ತು ಎಮ್ಮೆಗಳಲ್ಲಿ ಕರುವಿಲ್ಲದ ಕಾರಣ ಹಾಲು ಇಂಗಿಹೋಗಬಾರದಲ್ಲ. ಅದಕ್ಕಾಗಿ ದಿನಕ್ಕೆರಡು ಬಾರಿ ಒಕ್ಸಿಟೋಸಿನ್ ಇಂಜೆಕ್ಷನ್ ಚುಚ್ಚಿದಲ್ಲಿ ಹಾಲು ಸಹ ಸಹಜವಾಗಿಯೇ ಉಕ್ಕಿ ಹರಿಯುತ್ತದೆ. ಕರುವಿನ ಪಾಲಿನ ಹಾಲನ್ನು ಸಹ ಯಾವುದೇ ಎಗ್ಗಿಲ್ಲದೆ ಪಶುಗಳಿಂದ ಹಿಂಡಿ ಪಡೆಯಬಹುದು. ಎಂದರೆ ಮಾನವೀಯ ಭಾವನೆಗಳೆಲ್ಲವನ್ನೂ ಮರೆತು ಕೇವಲ ಲಾಭವೊಂದೇ ಆಸೆಯಿರಿಸಿ, ಪಶುಗಳನ್ನು ಹಾಲು ನೀಡುವ ಯಂತ್ರಗಳಾಗಿ ಮಾತ್ರ ಕಾಣುವಂತಹ ಹೀನ ಮಾನಸಿಕತೆ ಈಗ ಅಲ್ಲಿನ ಡೈರಿ ಮಾಲೀಕರದಾಗಿದೆ.

'ಹಾಲು ಹಿಂಡುವ ಸಲುವಾಗಿ ಈಗ ಬೆಳಿಗ್ಗೆ ಬೇಗ ಏಳಬೇಕೆಂಬ ಅಗತ್ಯವೇ ಇಲ್ಲ. ನಮಗನುಕೂಲವೆನಿಸಿದ ಸಮಯದಲ್ಲಿ ಪಶುವಿಗೆ ಒಂದು ಇಂಜೆಕ್ಷನ್, ಮರುಕ್ಷಣವೇ ಹಾಲು ಹಿಂಡಲು ಆರಂಭ, ಧಾರಾಳ ಹಾಲು'– ಈ ರೀತಿ ಸ್ವಲ್ಪವೂ ನಾಚಿಕೆ, ತಪ್ಪು ಇತ್ಯಾದಿ ಯಾವುದೇ ಅನಿಸಿಕೆ ಇಲ್ಲದೆ ಡೈರಿಯ ಕೆಲಸಗಾರರು ತಮ್ಮ ಸದ್ಯದ ರೀತಿಯನ್ನು ವರದಿ ಮಾಡುತ್ತಾರೆ.

ಔಷಧಿಗಳ ಅಂಗಡಿಗಳಲ್ಲಿ ವಿಕ್ರಯಿಸಲಾಗುವ ಈ ಕೃತ್ರಿಮ ಒಕ್ಸಿಟೋಸಿನ್ ಶೆಡ್ಯೂಲ್ ಎಚ್ ನಲ್ಲಿ ಬರುವಂತಹ ಒಂದು ಔಷಧಿಯಾಗಿದೆ. ಭಾರತದಲ್ಲಿ ಅದನ್ನು ಪಶುಗಳ ಮೇಲೆ ಬಳಸುವುದರಲ್ಲಿ ನಿಷೇಧವಿದೆ. ವೈದ್ಯರ ಚೀಟಿಯಿಲ್ಲದೆ ಅದನ್ನು ಖರೀದಿಸಲು ಆಗುವುದಿಲ್ಲ. ಅಷ್ಟಾದರೂ ಅದರ ಅಂಪ್ಯೂಲ್‌ಗಳು ಧಾರಾಳವಾಗಿ ಮತ್ತು ಸುಲಭದರದಲ್ಲಿ ಲಭ್ಯವಿದೆ. ಈ ಔಷಧಿಯ ಅಪಾಯಗಳ ಬಗ್ಗೆ ಡಾ. ಅವಿನಾಶ ಭೋಪ್ರಾ ಅವರು "ಈ ರೀತಿ ಇಂಜಕ್ಷನ್ ಮೂಲಕ ಚುಚ್ಚಲಾದ ಹಾರ್ಮೋನ್ ಕ್ರಮೇಣ ಹಾಲಿನಲ್ಲಿ ಸೇರಿಕೊಳ್ಳುತ್ತದೆ. ಅದು ಕಣ್ಣಿಗೆ ಹಾನಿಕರ, ವಿಶೇಷವಾಗಿ ಬೆಳೆಯುವ ಮಕ್ಕಳ ಕಣ್ಣುಗಳಿಗೆ ಅದು ಅಪಾಯಕಾರಿ. ಮಹಿಳೆಯರಲ್ಲಿ ಮತ್ತು ಅಪ್ರಾಪ್ತವಯಸ್ಕ ಹೆಣ್ಣುಮಕ್ಕಳಲ್ಲೂ ಅವರ ಪ್ರಜನನ ಶಕ್ತಿಗೆ ಅದು ಅತ್ಯಂತ ಆಘಾತಕಾರಿಯಾಗಿದೆ. ಈ ಹಾರ್ಮೋನಿನ ಏರುಪೇರಿನಿಂದಾಗಿ ಮಹಿಳೆಯರಲ್ಲಿ ಋತುಚಕ್ರ ಅಸ್ತವ್ಯಸ್ತಗೊಳ್ಳುವುದಲ್ಲದೆ, ಅವರ ಮುಖದಲ್ಲಿ ಅನಿಚ್ಛಿತಪ್ರದೇಶಗಳಲ್ಲಿ ಕೂದಲು ಬೆಳೆಯುವಂತೆ ಮಾಡುವುದು. ಅವರಲ್ಲಿನ ಕಾಣುವ ಕೇಳುವ ಶಕ್ತಿಯೂ ದುರ್ಬಲಗೊಳ್ಳುವುದು" ಎಂದು ಎಚ್ಚರಿಕೆ ನೀಡಿದ್ದಾರೆ.

ಸಮಸ್ಯೆ ಇಷ್ಟೇ ಅಲ್ಲ. ಹಲವು ಖಾಸಗಿ ಡೈರಿಗಳಲ್ಲಿ ಹಾಲಿನ ಗುಣಮಟ್ಟವನ್ನು ಮೇಲೇರಿಸುವ ಸಲುವಾಗಿ ಡಿಟರ್ಜಂಟ್, ಯೂರಿಯಾ ಮತ್ತು ಬಿಳಿಪೈಂಟ್ ಸಹ ಬಳಸಲಾಗುತ್ತಿರುವುದು ವರದಿಯಾಗಿದೆ. ಬಿಳಿಪೈಂಟ್ ಹಾಲಿನ ಬಣ್ಣವನ್ನು ಆಕರ್ಷಕಗೊಳಿಸುವ ಸಲುವಾಗಿ ಉಪಯುಕ್ತವಾದಲ್ಲಿ, ಡಿಟರ್ಜಂಟ್ ಹಾಲನ್ನು ನೊರೆನೊರೆಯಾಗಿ ಕಾಣಿಸುವುದರಲ್ಲಿ ಸಹಾಯಕವಾಗುತ್ತದೆ. ಇನ್ನು ಯೂರಿಯಾ ಸಾಗಾಟದಲ್ಲಿ ಹಾಲು ಹೆಪ್ಪುಗಟ್ಟದಂತೆ ಮಾಡುವಲ್ಲಿ ನೆರವಾಗುತ್ತದೆ. ಇವು ಮೂರರ ಬಳಕೆಯೂ ಆಹಾರ ಕಲಬೆರಕೆಯ ಕಾನೂನಿನಡಿಯಲ್ಲಿ ನಿಷೇಧಿತವಾಗಿದೆ. ಆದರೆ ಅನೇಕ ದೊಡ್ಡ ಪ್ರಮಾಣದ ಡೈರಿಗಳವರೂ ಟ್ರಕ್‌ಗಳಲ್ಲಿ ಹಾಲಿನ ಸಾಗಾಟ ಮಾಡುವಾಗ ಅದು ಹೆಪ್ಪುಗಟ್ಟದಂತೆ, ಪ್ಯಾಕ್ ಮಾಡುವಾಗಲೇ ಯೂರಿಯಾ ಸೇರಿಸುತ್ತಾರೆ.

ಒಟ್ಟಿನಲ್ಲಿ ಹಾಲನ್ನು ಅಮೃತವಾಗಿ ತಿಳಿಯಲಾಗುತ್ತಿದ್ದ ಕಾಲವೊಂದಿತ್ತು. ಈಗ ಅದು ವಿಷಯುಕ್ತವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಆರೋಗ್ಯವರ್ಧಕವಾಗಿ ಭಾವಿಸಲಾಗುತ್ತಿದ್ದ ಹಾಲು ನಿಮ್ಮ ಪರಿವಾರದ ಮಹಿಳೆಯರ ಮತ್ತು ಮಕ್ಕಳ ಆರೋಗ್ಯಕ್ಕೆ ಮಾರಕವಾಗಿರುವುದೂ ಈಗ ಸಾಧ್ಯವಿದೆ.

(ಕೃಪೆ: ಆಪ್ತ ಸಂವಾದ, ಧರ್ಮಭಾರತೀ)

# ಒಂದು ಹಸು = ಒಂದು ಲಕ್ಷ ರುಪಾಯಿ ಉತ್ಪನ್ನ


ಒಂದು ಹಸುವಿನ ಸೆಗಣಿಯಿಂದ ವರ್ಷವೊಂದಕ್ಕೆ ಒಂದು ಲಕ್ಷ ರುಪಾಯಿಗಳನ್ನು ಸಂಪಾದಿಸಲು ಸಾಧ್ಯವಿದೆ ಎಂದರೆ ನಂಬುವಿರಾ? ಅದು ಸಾಧ್ಯವಿದೆ ಎಂದು ತೋರಿಸಿಕೊಟ್ಟಿದ್ದಾರೆ, ಮಹಾರಾಷ್ಟ್ರದ ನೆಡೆಪ್ ಕಾಕಾ ಅವರು. ಮಹರ್ಷಿ ದಯಾನಂದ ಮತ್ತು ಗಾಂಧೀಜಿಯವರ ಕಟ್ಟಾ ಅನುಯಾಯಿ ಆಗಿರುವ ಅವರು ಹಲವಾರು ವರ್ಷಗಳ ಸತತ ಸಾಧನೆಯಿಂದ ಗೊಬ್ಬರ, ಕಟ್ಟಡಗಳ ರಚನೆಯಲ್ಲಿ ಬಳಸಲಾಗುವ ಗಾರೆ ಪೌಡರ್, ಸಾಬೂನು, ಅಗರಬತ್ತಿ ಇತ್ಯಾದಿಗಳನ್ನು ಸೆಗಣಿಯಿಂದ ಉತ್ಪಾದಿಸಿ ದೇಶದ ಹಲವಾರು ನಿರುದ್ಯೋಗಿಗಳಿಗೆ ಗಾಂಧಿ ಪ್ರಣೀತ ಅರ್ಥ ವ್ಯವಸ್ಥೆಯನ್ನು ತಮ್ಮದಾಗಿಸಿ, ಉದ್ಯೋಗಸ್ಥರನ್ನಾಗಿಸಲು ದಾರಿ ತೋರಿಸಿದ್ದಾರೆ. ಯವತಮಾಳ ಜಿಲ್ಲೆಯ ಪುಸದ್ ತಾಲ್ಲೂಕಿನಲ್ಲಿ ನೆಡೆಪ್ ಕಾಕಾ ಅವರು ಮೂರು ಹಸುಗಳನ್ನು ಸಾಕಿ ವರ್ಷವೊಂದರಲ್ಲಿ ಕೇವಲ ಸೆಗಣಿಯಿಂದಲೇ ಸುಮಾರು ಒಂದು ಲಕ್ಷ ರುಪಾಯಿಗಳನ್ನು ಸಂಪಾದಿಸುತ್ತಾರೆ. ಅವರು ಹಸುಗಳ ಹಾಲನ್ನು ಮಾರುವುದಿಲ್ಲ. ಅದು ಅವರ ಐದು ಸದಸ್ಯರುಳ್ಳ ಪರಿವಾರದ ಬಳಕೆಗಾಗಿ ಬೇಕಾಗುತ್ತದೆ. ಅವರ ಶೋಧ ಪ್ರಯೋಗಗಳಿಗೆ ಹೊಸದಿಲ್ಲಿಯ ಐ.ಐ.ಟಿ ಮತ್ತು ಬಡೋದರಾದ ಐ.ಟಿ.ಸಿ.ಎಲ್.ನಂತಹ ರಾಷ್ಟ್ರೀಯ ಸಂಸ್ಥೆಗಳಿಂದ ಮಾನ್ಯತೆ ದೊರೆತಿದೆ. ವಿಶೇಷ ರೀತಿಯ ವಿಧಾನದಿಂದ ತಯಾರಿಸಲಾಗುವ ನೆಡೆಪ್ ಕಂಪೋಸ್ಟ್ ಗೊಬ್ಬರಕ್ಕೆ ಮಹಾರಾಷ್ಟ್ರ ಮತ್ತು ರಾಜಸ್ಥಾನದ ಸರಕಾರಗಳು ತಮ್ಮ ಕೃಷಿ ವಿಭಾಗದ ಮೂಲಕ ಮಾನ್ಯತೆ ನೀಡಿವೆ.

ನೆಡೆಪ್ ಕಾಕಾ ಅವರು ೧೯೬೮ರಲ್ಲಿ ಸೆಗಣಿಯ ಕುರಿತು ವಿಶೇಷ ರೀತಿಯ ಶೋಧಕಾರ್ಯ ಆರಂಭ ಮಾಡಿದರು. ಮಣ್ಣು ಮತ್ತು ವನಸ್ಪತಿಗಳನ್ನು ಸೆಗಣಿಯೊಂದಿಗೆ ಸೇರಿಸಿ ಗೊಬ್ಬರವನ್ನು ತಯಾರಿಸುವುದರಲ್ಲಿ ಅವರಿಗೆ ಯಶಸ್ಸು ದೊರೆಯಿತು. ಹಿಂದೆ ಯಾವುದೋ ಒಂದು ದುರ್ಘಟನೆಯಿಂದಾಗಿ ದುರ್ಬಲಗೊಂಡಿದ್ದ ಅವರ ಒಂದು ಕೈಗೆ ಹಸುವಿನ ಸೆಗಣಿಯ ಜತೆ ನಿರಂತರ ಸಂಪರ್ಕದ ಕಾರಣದಿಂದಾಗಿ ಪುನಃ ಶಕ್ತಿ ಬಂತು.

ತನ್ನ ಕುಟುಂಬದ ಐವರು ಹಾಗೂ ಇನ್ನಿಬ್ಬರ ಸಹಾಯಕರ ನೆರವಿನಿಂದ ಅವರು ಪ್ರತಿವರ್ಷ ಅರುವತ್ತು ಸಾವಿರ ರುಪಾಯಿಗಳಷ್ಟು ಬೆಲೆಬಾಳುವ ಕಂಪೋಸ್ಟ್ ಗೊಬ್ಬರ ಮತ್ತು ಎರಡೂವರೆ ಲಕ್ಷ ರುಪಾಯಿಗಳಷ್ಟು ಬೆಲೆಬಾಳುವ ಸೆಗಣಿಯಿಂದ ತಯಾರಿಸಲಾಗುವ ಸಾಬೂನು ಹಾಗೂ ಅಗರಬತ್ತಿಗಳನ್ನು ಮಾರಾಟಮಾಡುತ್ತಿದ್ದಾರೆ. ಅವರು ಹೇಳುವಂತೆ ನಮ್ಮ ದೇಶದಲ್ಲಿ ಸರಕಾರದ ಅಂಕಿ ಅಂಶಗಳ ಪ್ರಕಾರವೇ ಹನ್ನೆರಡು ಕೋಟಿ ಹಸುಗಳಿದ್ದು ಅವುಗಳಿಂದ ವರ್ಷಾವಧಿ ನಲ್ವತ್ತು ಕೋಟಿ ಟನ್‌ಗಳ ಸಗಣಿ ಲಭಿಸುತ್ತಿದೆ. ಇದರಲ್ಲಿ ಸುಮಾರು ಮೂವತ್ತು ಶೇಕಡಾದಷ್ಟು (ಸುಮಾರು ಹನ್ನೆರಡು ಕೋಟಿ ಟನ್ನುಗಳಷ್ಟು) ಬೆರಣಿಗಾಗಿ ಪರಿವರ್ತಿತವಾಗಿ ಮನೆಗಳಲ್ಲಿ ಉರುವಲಾಗಿ ಬಳಕೆಯಾಗುತ್ತದೆ. ಉಳಿದ ಇಪ್ಪತ್ತೆಂಟು ಕೋಟಿಗಳಲ್ಲಿ ಕೇವಲ ಆರು ಕೋಟಿ ಟನ್‌ಗಳಷ್ಟು ಮಾತ್ರದಿಂದ ಗೊಬ್ಬರವನ್ನು ತಯಾರಿಸಲಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ನೆಡೆಪ್ ಕಾಕಾ ಅವರ ಅಭಿಪ್ರಾಯವೆಂದರೆ, ಅವರ ಪದ್ಧತಿಯನ್ನು ಅನುಸರಿಸಿದ್ದೇ ಆದಲ್ಲಿ ಕೇವಲ ಎಂಟು ಕೋಟಿ ಟನ್ ಸೆಗಣಿಯಿಂದಲೇ ಇನ್ನೂರ ನಲ್ವತ್ತು ಕೋಟಿ ಟನ್ ಕಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಇಪ್ಪತ್ತನಾಲ್ಕು ಸಾವಿರ ಕೋಟಿ ರುಪಾಯಿಗಳ ಆದಾಯ ಪಡೆಯಲು ಸಾಧ್ಯವಿದೆ. ಉಳಿದ ಸೆಗಣಿಯಲ್ಲಿ ಎರಡು ಕೋಟಿ ಟನ್‌ಗಳಿಂದ ಕಟ್ಟಡಗಳ ರಚನೆಗೆ ಉಪಯುಕ್ತವಾದ ಗಾರೆ ಪೌಡರ್, ನಾಲ್ಕು ಕೋಟಿ ಟನ್ ಸೆಗಣಿಯಿಂದ ಉರುವಲಿನ ಬೆರಣಿಗಳನ್ನು ತಯಾರಿಸಿ ಗ್ರಾಮೀಣ ಪ್ರದೇಶಗಳಲ್ಲಿ ಸಮಸ್ಯೆಯನ್ನು ಪರಿಹರಿಸಬಹುದು ಎಂದು ಅವರು ಅಭಿಪ್ರಾಯ ಪಡುತ್ತಾರೆ. ಇವೆಲ್ಲ ಕೆಲಸಗಳಿಗಾಗಿ ಒಂಭತ್ತರಿಂದ ಹತ್ತು ಕೋಟಿ ಜನರಿಗೆ ಸುಲಭವಾದ ಉದ್ಯೋಗವನ್ನೂ ಪೂರೈಸಬಹುದಾಗಿದೆ. ಅವರು ಹೊಗೆ ರಹಿತ ಒಲೆಯನ್ನು ವಿಕಾಸಗೊಳಿಸಿದ್ದಾರೆ. ಈ ಒಲೆಗಳಲ್ಲಿ ಐದುನೂರು ಗ್ರಾಮ್‌ನಷ್ಟು ಬೆರಣಿಗಳನ್ನು ಬಳಸಿ ಒಂದು ಕುಟುಂಬಕ್ಕೆ ಒಂದು ಹೊತ್ತಿಗಾಗುವಷ್ಟು ಅಡುಗೆಯನ್ನು ತಯಾರಿಸಬಹುದಾಗಿದೆ.

(ಕೃಪೆ: ಆಪ್ತ ಸಂವಾದ, ಧರ್ಮಭಾರತೀ)





ಕಂಗಾಯಂ ಜಲ್ಲಿಕಟ್ಟು (ತಮಿಳುನಾಡು) ಹೋರಾಟದ ಚಿತ್ರಗಳು. ಕಂಗಾಯಂ ಬಗ್ಗೆ ಲೇಖನಕ್ಕೆ ಪುಟ–೪ ನೋಡಿ.